ಜೊತೆ ಮಾತಾಡುತ್ತಿರುವಾಗ ಬೇಲಿ ಮತ್ತು ಅವನ ಮಗನನ್ನು ಸ್ವಲ್ಪ ಅಡ್ಡಾಡಿಸಿಕೊಂಡು ಬರಲು ತನ್ನ ಸಹಚರರಿಬ್ಬರಿಗೂ ಹೇಳಿದ. ಆ ದಟ್ಟ ಮರಗಳತ್ತ ಅಪ್ಪ ಮಗನನ್ನು ಅವರು ದೂಡಿಕೊಂಡು ಹೋದರು. ಅರಣ್ಯದಲ್ಲಿ ಮರೆಯಾಗುವ ಮುನ್ನ ಬೇಲಿ ತನ್ನ ತಾಯಿಗೆ ಕೂಗಿ ಹೇಳಿದ: 'ಅವ್ವಾ, ನೀ ಹೆದರಬ್ಯಾಡ, ಒಂದ್ನಿಮಿಷದಾಗ ನಾ ಬರ್ತೀನಿ.' 'ಅಲ್ಲಿ ಹೋಗಬ್ಯಾಡೋ ಬೇಲಿ. ಅವರು ಹೇಳಿದಂಗ ಕೇಳಬ್ಯಾಡ... ಕರುಳು ಕಿತ್ತುಬರುವಂತಿದ್ದ ತಾಯಿಯ ದನಿ ಮಗನಿಗೆ ಮುಟ್ಟಲಿಲ್ಲ.

ಮುದುಕಿಯ ದೃಷ್ಟಿ ಈಗ ಮತ್ತೆ ಮಿಸ್‌ಫಿಟ್‌ನತ್ತ ಹರಿಯಿತು. 'ಅಲ್ಲಪಾ, ನೀನು ತುಂಬ ಒಳ್ಳೆಯಂವ. ಹಂಗ್ಯಾಕ ನಮಗ ಹೆದರಿಸಿಲಿಕ್ಕ ಹತ್ತೀದಿ...'

'ನಾನು ಒಳ್ಳೆಯವನು ಅಂತ ಯಾರು ಹೇಳಿದ್ದು? ಸ್ಸಾರಿ, ನಾ ಶರ್ಟ್ ಹಾಕ್ಕೊಂಡಿಲ್ಲ.'

ಮುದುಕಿ ಔದಾರ್ಯದಿಂದೆಂಬಂತೆ ಅಂದಳು: 'ಬೇಲಿ ಸೂಟ್‌ಕೇಸಿನೊಳಗ ಅಂವಂದು ಇನ್ನೊಂದು ಶರ್ಟ್ ಐತಿ. ಅದನ್ನ ಬೇಕಾದರೆ ಹಾಕ್ಕೊಳ್ಳುವಿಯಂತ...'

'ನನ್ನ ಗಂಡ ಮತ್ತು ಮಗನ್ನ ಎಲ್ಲಿ ಕರಕೊಂಡು ಹೋದ್ರು...' ಬೇಲಿಯ ಹೆಂಡತಿ ಚೀರಿ ಅಳುತ್ತಿದ್ದಳು.

ಮುದುಕಿ ಮಿಸ್‌ಫಿಟ್‌ನ ಮನ ಕರಗಿಸಲು ನೋಡಿದಳು: 'ನಾವು ಕೆಟ್ಟದ್ದನ್ನು ಬಿಟ್ಟುಹಾಕಿ ಒಳ್ಳೆಯವರಾಗಬೇಕು. ಅಂದ್ರ ಜೀವನ ಚೆಂದ ಇರ್ತದ.. ನೀನು ಹೀಂಗಿದ್ರ ಜೀವನಪೂರ್ತಿ ಪೋಲಿಸರು ಬೆನ್ನು ಹತ್ತಿರತಾರ. ನಿನ್ನ ಒಳ್ಳೆಯ ಮನುಷ್ಯನನ್ನಾಗಿ ಮಾಡು ಅಂತ ದೇವರ ಹತ್ತಿರ ನೀ ಎಂದಾದರೂ ಬೇಡಿಕೊಂಡಿಯೇನು...'

'ಇಲ್ಲ. ನಾ ಯಾವತ್ತೂ ಪ್ರಾರ್ಥನೆ ಮಾಡಿಲ್ಲ. ದೇವರ ಹತ್ತಿರ ನಾನೆಂದೂ ಮೊಣಕಾಲು ಊರಿಲ್ಲ.'

ಅವನು ಹಾಗೆ ಹೇಳಿದ ಕ್ಷಣವೆ ಗಿಡಮರಗಳ ಕಡೆಯಿಂದ ಒಂದಾದ ಮೇಲೊಂದರಂತೆ ಗುಂಡಿನ ಶಬ್ದಗಳು ಕೇಳಿಬಂದವು. 'ಓ, ಬೇಲಿ, ಓ, ನನ್ನ ಪ್ರಾಣವೆ...' ಅಜ್ಜಿ ಚೀರಿದಳು. ಮಿಸ್‌ಫಿಟ್ ತನ್ನ ಮಾತು ಮುಂದುವರೆಸಿದ: 'ನಾನು ಮೊದಲು ಚರ್ಚಿನಲ್ಲಿ ಹಾಡ್ತಾ ಇದ್ದೆ. ಮಿಲಿಟರಿಯೊಳಗ ಇದ್ದೆ. ಎರಡು ಮದುವೆಯಾಗೇನಿ. ಒಕ್ಕಲುತನ ಮಾಡೇನಿ, ಮನುಷ್ಯರನ್ನು ಜೀವಂತ ಸುಡಿಸೇನಿ... ಹೆಂಗಸರನ್ನ ಬಾರಕೋಲಿನಿಂದ ಹೊಡೆಯೋದನ್ನ ನಿಂತು ನೋಡೇನಿ...'

'ಓ ದೇವರೇ, ಎಷ್ಟೆಲ್ಲ ಪಾಪ ಮಾಡಿಯಲ್ಲೋ? ಸಾಕ ಮಾಡಪಾ ಸಾಕುಮಾಡು, ನಿನ್ನ ಮಾತು ನನಗ ಕೇಳಾಕ ಆಗವಲ್ದು... ನಿನ್ನ ತಪ್ಪಿಗೆ ದೇವರಲ್ಲಿ ಕ್ಷಮಾ ಕೇಳು. ಆಂವ ಕ್ಷಮಿಸ್ತಾನ...'

'ನನಗ ಗೊತ್ತಿದ್ದಂಗ ಬೆಳಿಬೇಕಾದ್ರ ನಾನು ಎಂದೂ ಕೆಟ್ಟ ಹುಡುಗ ಆಗಿರಲಿಲ್ಲ. ಆದರ ಏನೋ ಒಂದು ಸಣ್ಣ ತಪ್ಪಿಗಾಗಿ ಜೈಲಿಗೆ ಕಳಿಸಿದ್ರು. ಆ ನಾಲ್ಕು ಗ್ವಾಡಿ ಒಳಗ ನನಗ ಹುಚ್ಚು ಹಿಡಿಯೋದೊಂದೆ ಬಾಕಿಯಿತ್ತು. ನನ್ನ ಇಂದು ಬಿಡುಗಡೆ ಮಾಡ್ತಾರು, ನಾಳೆ ಬಿಡುಗಡೆ ಮಾಡ್ತಾರು ಅಂತ ಕಾದಿದ್ದೇ ಬಂತು. ಏನೂ ಆಗಲಿಲ್ಲ...'

'ಏನೋ ತಪ್ಪು ಮಾಡಿದ್ದಕ್ಕ ನಿನ್ನ ಒಳಗ ಹಾಕಿರಬೇಕು ಅಥವಾ ಯಾರನ್ನೋ ಹಾಕೋ ಬದಲು ತಪ್ಪಿ ನಿನ್ನ ಹಾಕಿರಬೇಕು.'

'ಇಲ್ಲ, ನಮ್ಮ ಅಪ್ಪನ ಕೊಲೆ ಮಾಡೇನಿ ಅಂತ ಸಾಬೀತು ಮಾಡೋವಂಥ ದಾಖಲೆ ಅವರ ಹತ್ತಿರ ಇದ್ದವು. ಆದರ ನಮ್ಮಪ್ಪ ಸಾಂಕ್ರಾಮಿಕ ಫ್ಲೂ ರೋಗಕ್ಕ ಬಲಿಯಾಗಿದ್ದ. ಮೌಂಟ್ ಹೋಪ್‌ವೆಲ್ ರುದ್ರಭೂಮಿಯೊಳಗ ಅವನ ಗೋರಿ ಇವತ್ತಿಗೂ ಐತಿ...'

'ನೀನು ಭಕ್ತಿಪೂರ್ವಕ ಪ್ರಾರ್ಥನೆ ಸಲ್ಲಿಸಿದರ ಜೇಸಸ್ ನಿನಗ ಸಹಾಯ ಮಾಡಬಹುದು...'

'ಅದು ಖರೆ...'

ಅವನ ಮಾತಿನಿಂದ ಮುದುಕಿಗೆ ಆಶಾಕಿರಣ ಗೋಚರಿಸಿತು: 'ಹಂಗಿದ್ರ ಈಗಿಂದೀಗ ನೀನು ಪ್ರೇಯರ್ ಹೇಳು...'